ನನ್ನನ್ನು ಸರ್ ಅನ್ನಬೇಡಿ. ಶೆಟ್ಟಿ ಎಂದೇ ಕರೆಯಿರಿ' ಎಂದು ಹೇಳುತ್ತಾ, 'ನೀವು ಗೋವಿಂದಪ್ಪ ಕಾಲೇಜಿನಲ್ಲಿ ಇಂಗ್ಲಿಷ್ ಲೆಕ್ಚರರು ಆಗಿದ್ದಾಗ ನಾನು ಪಿ.ಯು.ಸಿ. ಓದುತ್ತಿದ್ದೆ. ಆಗ ಪಿ.ಯು.ಸಿ. ಒಂದು ವರುಷದ ಕೋರ್ಸಾಗಿತ್ತು. ನಾನು ನಿಮ್ಮ ಸ್ಟೂಡೆಂಟ್ ಆಗಿದ್ದೂ ಇಂಗ್ಲಿಷಿನಲ್ಲೇ ಫೇಲಾಗಿದ್ದೆ. ಅಷ್ಟರಲ್ಲಿ ಒಂದು ವರುಷದ ಪಿ.ಯು.ಸಿ. ಕೋರ್ಸು ಎರಡು ವರ್ಷ ಅಂತ ಆಯ್ತು. ಸಾಯಲಿ ಬಿಡಿ ಎಂಬಂತೆ ಹೈಯರ್ ಸ್ಟಡೀಸ್‌ನ ಬಿಟ್ಟು ನಾನು ಪೊಲೀಸ್ ಪೇದೆಯಾಗಿ ಈ ಇಲಾಖೆಗೆ ಸೇರಿದೆ. ಈಗ ಏಳು ವರುಷಗಳಿಂದ ನಾನು ಎಸ್.ಐ. ಆಗಿದ್ದೇನೆ. ಇನ್ನು ಮೂರು ವರುಷಗಳ ಸರ್ವೀಸ್ ಇದೆ. ಕಾರ್ಕಳಕ್ಕೆ ಬಂದು ಆರು ತಿಂಗಳಾಯ್ತು. ಎಷ್ಟು ದಿನ ಇಲ್ಲಿ ಇರ್ತೇನೋ ಗೊತ್ತಿಲ್ಲ ಎನ್ನುತ್ತಾ, 'ನೀವು ಈಗ ರಿಟೈರ್ಡ್ ಆಗಿರಬೇಕಲ್ವ ಸರ್? ಗೋವಿಂದಪ್ಪ ಕಾಲೇಜನ್ನು ಬಿಟ್ಟ ನೀವು ರಾಂಪುರಕ್ಕೆ ಹೋಗಿದ್ದೀರಿ ಎನ್ನುವುದು ನನಗೆ ಆಮೇಲೆ ತಿಳಿಯಿತು. ಬಟ್ ನೀವೇನು ಇಲ್ಲಿ?' ಎಂದು ಪ್ರಶ್ನಿಸಿದರು.

ರಾಯರು 'ಅದೆಲ್ಲ ಮತ್ತೆ ಹೇಳ್ತೇನೆ. ನೀವು ನನ್ನ ಸ್ಟೂಡೆಂಟ್ ಆಗಿದ್ದದ್ದು ಸುಮಾರು ಮೂವತ್ತೈದು ವರುಷಗಳ ಹಿಂದೆ ಎಂದು ಈಗ ನೆನಪಾಗುತ್ತಿದೆ. ಆದರೂ ನೀವು ನನ್ನನ್ನು ಐಡೆಂಟಿಫೈ ಮಾಡಿದ್ದು ಹೇಗೆ? ಈಗಲೂ ನಾನು ಹಿಂದೆ ಇದ್ದ ಹಾಗೆಯೇ ಕಾಣಿಸ್ತೇನಾ?' ಎಂದು ಪ್ರಶ್ನಿಸಿದರು.

ಎಸ್.ಐ. ಶಿವರಾಮಶೆಟ್ಟರು 'ಸಹಜವಾಗಿ ನಿಮ್ಮ ದೇಹದಲ್ಲಿ ಸ್ವಲ್ಪ ಬದಲಾವಣೆ ಆಗಿದೆ ಸರ್. ಆದರೆ ನಾನು ಆ ನೆಲೆಯಿಂದ ನಿಮ್ಮ ಗುರುತು ಹಿಡಿಯಲಿಲ್ಲ. ನಿಮ್ಮ ವಿಸಿಟಿಂಗ್ ಕಾರ್ಡ್ ನೋಡಿದಾಗ ಅದರಲ್ಲಿ 'ಕೆ. ಶ್ರೀನಿವಾಸರಾವ್, ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರು, ಬಸವೇಶ್ವರ ಕಾಲೇಜ್, ರಾಂಪುರ' ಎಂದು ಬರೆದಿತ್ತು. ತಕ್ಷಣ ನೀವು ಕೊಪ್ಪರಿಗೆ ಶ್ರೀನಿವಾಸರಾವ್ ಎಂದು ನಮ್ಮ ಕಾಲೇಜಿನಲ್ಲಿ ಪ್ರಸಿದ್ಧರಾಗಿದ್ದದ್ದು ನೆನಪಿಗೆ ಬಂದು ಖುಷಿಯಾಯಿತು' ಎಂದು ನಕ್ಕರು.

'ಎಸ್. ನನಗೂ ತುಂಬಾ ಸಂತೋಷವಾಯಿತು, ನಿಮ್ಮನ್ನು ನೋಡಿ!' ಎಂದು ರಾಯರು ಹೇಳುತ್ತಿದ್ದ ಹಾಗೆ ಶಿವರಾಮ ಶೆಟ್ಟರು ಟೇಬಲ್ಲಿನ ಮೇಲಿರುವ ಬೆಲ್ ಬಡಿದು ಒಳಗೆ ಬಂದ ಪೊಲೀಸ್ ಪೇದೆಗೆ, 'ಮೂರು ಲೈಮ್ ಟೀ ತರಲಿಕ್ಕೆ ಹೇಳು' ಎಂದು ಆಜ್ಞಾಪಿಸಿ, 'ಮತ್ತೆ ಹೇಗಿದ್ದೀರಿ ಸರ್, ಎಲ್ಲಾ ಆರಾಮನಾ?' ಎಂದು ರಾಯರನ್ನು ಪ್ರಶ್ನಿಸಿದರು.

'ಆರಾಮ ಅಂತಲೂ ಇಲ್ಲ ವಿರಾಮ ಅಂತಲೂ ಇಲ್ಲ. ಎರಡೂ ಒಂದೇ ಎನ್ನುವ ಹಾಗೆ ಇದ್ದೇನೆ' ಎಂದರು ರಾಯರು ನಗುತ್ತಾ. 'ನಾನು ಹೆಂಡತಿಯ ಆರೋಗ್ಯದ ಉದ್ದೇಶಕ್ಕೆ ಸೀತಾಪುರಕ್ಕೆ ಬಂದು ನೆಲೆಸಿದ್ದೇನೆ. ನನಗೆ ರಾಂಪುರದಲ್ಲಿ ಸೀತಾಪುರದ ಹೊಟೇಲ್ ಉದ್ಯಮಿ ಸದಾಶಿವ ಶೆಟ್ಟರ ಪರಿಚಯವಾಯ್ತು' ಎಂದು ಶೆಟ್ಟರ ಕಡೆ ಮುಖ ಮಾಡಿ, 'ಇವರು ಬಹಳ ವರುಷಗಳಿಂದ ಅಲ್ಲಿ ನನ್ನ ವಾಕಿಂಗ್‌ಮೇಟ್ ಆಗಿದ್ದವರು. ಹಾಗಾಗಿ ನಮ್ಮ ನಡುವೆ ಇದ್ದ ಸ್ನೇಹ ರಕ್ತಸಂಬಂಧವನ್ನು ಮೀರಿದ ಬಾಂಧವ್ಯವಾಯಿತು. ನಾನು ನಿವೃತ್ತನಾಗುವ ಹೊತ್ತಿಗೆ ಶೆಟ್ಟರು ಸಹ ತಮ್ಮ ಸಹೋದರರ ಒಡೆತನದಲ್ಲಿದ್ದ 'ಶೆಟ್ಟೀಸ್ ಹೊಟೇಲ್'ನಿಂದ ಅನಿವಾರ್ಯವಾಗಿ ಬಿಡುಗಡೆ ಪಡೆದು ಅವರ ಹುಟ್ಟೂರಾದ ಸೀತಾಪುರಕ್ಕೆ ಹೊರಟು ನಿಂತರು. ಅದೇ ಸಂದರ್ಭದಲ್ಲಿ ರಾಂಪುರಕ್ಕೆ ವಿದಾಯ ಹೇಳೋಣ ಎಂದು ನನ್ನ ಹೆಂಡತಿ ಒತ್ತಾಯಿಸಿದ್ದರಿಂದ ನಾವೂ ಸೀತಾಪುರಕ್ಕೇ ಹೊರಟು ಬಂದೆವು. ಶೆಟ್ಟರು ಅವರ ಹಿರಿಯರು ಕಟ್ಟಿಸಿದ ಮನೆಯಲ್ಲಿ ಇದ್ದಾರಾದರೆ, ನಾನು ಅವರ ಮನೆಯಿಂದ ಸುಮಾರು ಒಂದು ಫರ್ಲಾಂಗು ದೂರದಲ್ಲಿ ಯಾರೋ ಒಬ್ಬರು ಕಟ್ಟಿಸುತ್ತಿದ್ದ ಮನೆಯನ್ನು ಖರೀದಿಸಿ ಅಲ್ಲಿದ್ದೇನೆ' ಎಂದರು.

ಎಸ್.ಐ. ಸಾಹೇಬರು 'ಸರ್, ಸುಮಾರು ಮೂವತ್ತೆದಕ್ಕೂ ಮಿಕ್ಕಿದ ವರುಷಗಳಲ್ಲಿ ಪೇಟೆಯಲ್ಲೇ ವಾಸವಾಗಿದ್ದ ನಿಮಗೆ ಈಗ ಹಳ್ಳಿ ಹೇಗೆ ಒಗ್ಗುತ್ತೆ ಅಂತ ನನಗೆ ಆಶ್ಚರ್ಯವಾಗುತ್ತಿದೆ. ನಾನಂತೂ ಹಳ್ಳಿಗೆ ಹೋಗುವ ಹಾಗಿಲ್ಲ ಅಂದು ಕೊಂಡಿದ್ದೇನೆ. ಕಾರ್ಕಳದಲ್ಲೇ ಒಂದು ಸೈಟ್ ಖರೀದಿಸಿ ಮನೆಯನ್ನೂ ಕಟ್ಟಿಸುತ್ತಿದ್ದೇನೆ' ಎಂದರು.

(ಸಶೇಷ)

## ಪ್ರತಿಕ್ರಿಯೆ

ಮೃಗತೃಷ್ಣ THE MIRAGE

### ಶೀತವೂ ಉಷ್ಣವೂ...

ಕೇಶವ ರೆಡ್ಡಿ ಹಂದ್ರಾಳರ 'ಮೃಗತೃಷ್ಣ' ಧಾರಾವಾಹಿ ಕುತೂಹಲಭರಿತವಾಗಿತ್ತು. ಆದರೆ ಕಾದಂಬರಿ ಅವಸರದಲ್ಲಿ ಕೊನೆಗೊಂಡಿತು ಅನ್ನಿಸಿತು. ಡಾ. ಆಮ್ರಪಾಲಿ ಅವರ ಪೇಶಂಟ್ ವಿಚಾರ ಪೂರ್ತಿ ಆಗಲೇ ಇಲ್ಲ. ವಿಕ್ರಮ್ ರೆಡ್ಡಿಯ ಸಾವು ಮತ್ತು ಅವರ ಕೇಸ್ ಕೂಡ ಅರ್ಧದಲ್ಲೇ ಉಳಿಯಿತು.

—ಮೇಘನಾ ರಘುನಂದನ್, ಹೂವಿನಹಡಗಲಿ

### ಸೊಗಸಾಗಿತ್ತು; ಆದರೆ...

ಧಾರಾವಾಹಿ ಸೊಗಸಾಗಿ ಮೂಡಿ ಬಂತು. ಆದರೆ, ಕೊನೆಯ ಕಂತಿನ ಕೊನೆಯ ಪ್ಯಾರಾದಲ್ಲಿ ಲೇಖಕರು ಕಥೆಯಲ್ಲಿ ಬಂದ ಪಾತ್ರಗಳೆಲ್ಲದರ ಬಗ್ಗೆ ಒಂದೆರಡು ಸಾಲುಗಳಲ್ಲಿ ಹೇಳಿದ್ದು ನಿರಾಸೆ ಮೂಡಿಸಿತು.

—ಸು. ವಿಜಯಲಕ್ಷ್ಮಿ, ಶಿವಮೊಗ್ಗ

### ಹೊಸ ಜಗತ್ತು

ಕಾದಂಬರಿ ನಮಗೆ ಅಷ್ಟಾಗಿ ತಿಳಿಯದ ರಾಜಕಾರಣ ಮತ್ತು ಶ್ರೀಮಂತ ಜಗತ್ತಿನ ವ್ಯಕ್ತಿಗಳ ಬದುಕಿನ ಶೈಲಿಯನ್ನು ಪರಿಚಯಿಸಿತು. ಸುಖ, ಭೋಗ, ಸುರತಗಳಿಗಾಗಿ ಮನುಷ್ಯ ಯಾವ ಯಾವ ಮಟ್ಟಕ್ಕೆಲ್ಲ ಇಳಿಯಬಲ್ಲ ಎನ್ನುವುದನ್ನು ಕಾದಂಬರಿಕಾರರು ಸೂಕ್ಷ್ಮವಾಗಿ ಕಟ್ಟಿಕೊಟ್ಟಿದ್ದಾರೆ. ನಾಗರಿಕತೆಯ ಹೆಸರಿನಲ್ಲಿ ಮೌಲ್ಯಗಳಿಗೆ ತಿಲಾಂಜಲಿ ನೀಡಿರುವ ಮನುಷ್ಯ ಮತ್ತೆ ತನ್ನನ್ನು ತಾನು ಒರೆಗೆ ಹಚ್ಚಿಕೊಳ್ಳಲು ಈ ಕಾದಂಬರಿ ಪ್ರೇರೇಪಿಸುವಂತಿದೆ.

—ಜಯಸುಧಾ, ಹೈದರಾಬಾದ್

### ಕೇರಳ ಪ್ರವಾಸ

ಕ್ರಾಂತಿರೆಡ್ಡಿಯ ಕೇರಳದ ಪ್ರವಾಸ ನಮ್ಮನ್ನೂ 'ದೇವರ ನಾಡಿನಲ್ಲಿ' ಸುತ್ತಾಡಿಸಿತ್ತು. ಆದರೆ, ಕೊನೆಗೆ ನೆನಪಿನಲ್ಲಿ ಉಳಿದದ್ದು ಪ್ರವಾಹದ ದುರಂತ ಚಿತ್ರಗಳೇ. ಪ್ರಕೃತಿ ಮತ್ತು ಮನುಷ್ಯ ಪ್ರಕೃತಿಯ ಹಲವು ಮಜಲುಗಳನ್ನು 'ಮೃಗತೃಷ್ಣ' ಸೊಗಸಾಗಿ ಚಿತ್ರಿಸಿದೆ.

—ಚಂದ್ರಪ್ಪ ಕೆ., ತುಮಕೂರು

### ಅಸ್ಪಷ್ಟ ಉದ್ದೇಶ

ಕಾದಂಬರಿಕಾರರ ಉದ್ದೇಶ ಸ್ಪಷ್ಟವಾಗಿ ತಿಳಿಯಲಿಲ್ಲ. ಕಥಾನಾಯಕ ಕ್ರಾಂತಿರೆಡ್ಡಿ ತನ್ನಣ್ಣ ಸತ್ತು ಹೋಗಿದ್ದು ತಿಳಿದೂ ಸಿಂಧು ಮೆನನ್ ತಂದೆ ಸತ್ತರೆಂದು ತಿಳಿದು ಅವಳ ಜೊತೆ ಕೇರಳಕ್ಕೆ ಬರುವುದು ಸಹಜ ಎನ್ನಿಸಲಿಲ್ಲ. ಇಬ್ಬರ ತಾಯಿ ಬೇರೆಯಾದರೂ ತಂದೆ ಒಬ್ಬನೇ ಅಲ್ಲವೇ, ಅಣ್ಣ ಅನ್ನುವ ಮಮಕಾರ ಇರುವುದಿಲ್ಲವೇ. ನಯ್ಯಾರ್ ಅವರು ವಿಮಾನ ಟಿಕೆಟ್ ಕಾದಿರಿಸಿ, ಅಣ್ಣನ ಹೆಣ ನೋಡಲು ಕಳಿಸುತ್ತಾರೆ. ಇದೆಂತಹ ವಿಪರ್ಯಾಸ.

ಹೆಂಡತಿಗೆ ವಿಚ್ಛೇದನ ನೀಡಿ ಭಗವಾನ್ ಕುಟ್ಟಿಯ ಹೆಂಡತಿಯಾದ ಸಿಂಧು ಮೆನನ್‌ಳನ್ನು ಮದುವೆಯಾಗುವುದು ಎಷ್ಟು ಸರಿ? ಇಡೀ ಧಾರಾವಾಹಿಯಲ್ಲಿ ಎಲ್ಲಾ ಹೆಂಗಸರಿಗೂ ಬೇರೊಬ್ಬ ಗಂಡಸು, ಎಲ್ಲಾ ಗಂಡಸರಿಗೂ ಇನ್ನೊಬ್ಬ ಹೆಂಗಸಿನ ಜೊತೆಗೆ ಸಂಬಂಧವಿದೆ.

—ಎಸ್. ವಿ. ಗೋಪಾಲ್ ರಾವ್, ಬೆಂಗಳೂರು

### ಟಿ. ಕೆ. ರಾಮರಾಯರ ನೆನಪು

ಮನುಷ್ಯ ಸಂಬಂಧಗಳಲ್ಲಿ ಬರೀ ಪೊಳ್ಳುತನಗಳನ್ನು ಕಾದಂಬರಿ ಬಿಂಬಿಸಿದೆ. ಕೊನೆಗೆ ತರಾತುರಿಯಲ್ಲಿ ಪ್ರತೀ ಪಾತ್ರಗಳಿಗೂ ದಡ ಸೇರಿಸುವ ಬದ್ಧತೆಯನ್ನು ಕಾದಂಬರಿಕಾರರು ತೋರಿದ್ದಾರೆ. ಹಲವು ದಶಕಗಳ ಹಿಂದೆ ನಮ್ಮ ನೆಚ್ಚಿನ 'ಸುಧಾ'ದಲ್ಲಿ ಪ್ರಕಟವಾಗುತ್ತಿದ್ದ ಟಿ. ಕೆ. ರಾಮರಾಯರ ಪತ್ತೇದಾರಿ ಶೈಲಿಯ ಬರವಣಿಗೆ ನೆನಪಾಯಿತು.

—ಎಂ.ಶಂಕರ್, ಬೆಂಗಳೂರು

### ಸಂಬಂಧಗಳ ಸರಳೀಕರಣ

ಸಾವಿನಂಥ ನೋವಿನ ಸಂದರ್ಭಗಳಲ್ಲೂ ವೈಯಕ್ತಿಕ ತೆವಲುಗಳಲ್ಲಿ ಮಗ್ನವಾಗುವ, ಎಲ್ಲವನ್ನೂ ಲೈಟಾಗಿ ಸ್ವೀಕರಿಸುವ ಹೈಕ್ಲಾಸ್ ಸೊಸೈಟಿಯ ಜನರನ್ನು ಕಂಡು ಹೇಸಿಗೆ ಅನಿಸಿತು.

—ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ